ಶ್ರೀ ಕೆ. ಎಲ್. ನರಸಿಂಹಯ್ಯ.—ಮೈದಾಳ ಕೆರೆಯ ನೀರಿನ ಹಂಚಿಕೆಯ ಬಗ್ಗೆ ಸರ್ಕಾರ ಎಕ್ಸ್‌ಪೈರಿ ಕಮಿಟಿ ಮಾಡಿದ್ದು ಯಾವ ತಾರೀಖಿನಲ್ಲಿ ?

†ಶ್ರೀ ಎಂ. ಎನ್. ನಾಗನೂರ್.—ಆ ಕಮಿಟಿಯನ್ನು ಜುಲೈ 1951ರಲ್ಲಿ ನೇಮಕಮಾಡಿದ್ದು.

ಶ್ರೀ ಕೆ. ಎಲ್. ನರಸಿಂಹಯ್ಯ.—ಆ ರೀತಿ 1951ರಲ್ಲಿ ಆ ಕಮಿಟಿಯನ್ನು ನೇಮಕ ಮಾಡಿದ್ದರೂ, ಇದುವರೆಗೆ ಸರ್ಕಾರ ಆ ಕಮಿಟಿಯ ವರದಿಯಮೇಲೆ ಏತಕ್ಕೆ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ ?

Sri M. N. NAGHNOOR.—This Committee has made some interim suggestions and they have been implemented. The Committee is due to submit its report.

†Sri H. M. CHANNABASAPPA.—Hon'ble Member is also a member of that Committee. There have been several resolutions passed by that Committee and they have made some suggestions. Those suggestions are being implemented. The Committee has not been able to take a final decision because some information required by the Committee has not been furnished.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಕಮಿಟಿಯ ವರದಿ ಸರ್ಕಾರಕ್ಕೆ ಸಂಪೂರ್ಣವಾಗಿ ಬಂದು ನಾಲ್ಕು ವರ್ಷಗಳಾಗಲಿಲ್ಲವೇ ?

ಶ್ರೀ ಎಂ. ಎನ್. ನಾಗನೂರ್.—ಇಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ನಾನೂ ಒಬ್ಬ ಆ ಕಮಿಟಿಯ ಸದಸ್ಯನಾಗಿದ್ದೇನೆ. ವರದಿಯನ್ನು ಪೂರ್ಣವಾಗಿ ಮಾಡಿ ಕಳುಹಿಸಿದ್ದೇನೆ. ಮಂತ್ರಿಗಳು ಬಂದಿಲ್ಲವೆಂದು ಹೇಳಿದರೆ, ಇನ್ನಾವರೀತಿ ಪ್ರಶ್ನೆ ಹಾಕಬೇಕು ?

Sri H. M. CHANNABASAPPA.—The Hon'ble Member is aware that the Committee has not finalised its proceedings.

ಶ್ರೀ ಕೆ. ಎಲ್. ನರಸಿಂಹಯ್ಯ.—ಆರು ವರ್ಷಗಳಿಂದ ಸರ್ಕಾರಕ್ಕೆ ಬೇಕಾದಂಥ ಮಾಹಿತಿಗಳನ್ನೆಲ್ಲಾ ಈ ಬಗ್ಗೆ ನೇಮಕವಾದ ಸಮಿತಿಯವರಿಂದ ತರಿಸಿಕೊಳ್ಳುತ್ತಿದ್ದರೂ, ಇನ್ನೂ ಇದುವರೆಗೆ ಯಾವ ತೀರ್ಮಾನವನ್ನೂ ಹೊರಡಿಸದಿರುವುದು ಯಾರ ಕರ್ತವ್ಯ ?

Sri H. M. CHANNABASAPPA.—Quite so. There is omission on the part of Government. But I only drew the attention of the member to the fact that the Committee has not finalised its proceedings yet.

———

Delay in the construction of the College Building at Tumkur.

*Q.—394. Sri K. L. NARASIMHAIAH (Hebbur).—

Will the Government be pleased to state :—

(*a*) the reasons for the delay in constructing the College building at Tumkur ;

(*b*) whether they are aware that classes are held at present between 8 A M. and 6 P.M. in shift system ?

A.—Sri ANNA RAO GANAMUKHI (Minister for Education).—

(*a*) The University Syndicate is yet to take a final decision on the proposal to construct the Tumkur College building.

(*b*) Yes. The College is working from 8 A.M. to 5-30 P.M.

ಶ್ರೀ ಕೆ. ಎಲ್. ನರಸಿಂಹಯ್ಯ.—ತುಮಕೂರಿನಲ್ಲಿ ಕಾಲೇಜು ಪ್ರತಿ ದಿವಸ 8 ಗಂಟೆಯಿಂದ ಸಾಯಂಕಾಲ 5½ ಘಂಟೆಯವರೆಗೂ ಜಾಗವಿಲ್ಲದೆ ನಡೆಯುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಅಣ್ಣಾರಾವ್ ಗಣಮುಖಿ.—ಉತ್ತರದಲ್ಲಿಯೇ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಮಂತ್ರಿಗಳು ಎಷ್ಟೋಸಾರಿ ಅಲ್ಲಿಗೆ ಬಂದು ಕಾಲೇಜಿಗೆ ಸ್ಥಳ ಸಂಕೋಚವಾಗಿರುವುದನ್ನು ನೋಡಿದ್ದರೂ ಮತ್ತು ಕಾಲೇಜು ಕಟ್ಟಡ ಕಟ್ಟಿಸುವುದಕ್ಕೆ ಸುಮಾರು ಒಂದೂವರೆ ವರ್ಷಗಳ ಹಿಂದೆಯೇ ತೀರ್ಮಾನವಾಗಿದ್ದರೂ ಸರ್ಕಾರದವರು ಇನ್ನೂ ಏಕೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟದ್ದಾದ್ದರಿಂದ್ದ ಸರ್ಕಾರ ಇನ್ನೂ ಯಾವ ಕ್ರಮವನ್ನೂ ಆ ಬಗೆ, ತೆಗೆದುಕೊಂಡಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಸರ್ಕಾರಕ್ಕೆ ಈ ವಿಷಯದಲ್ಲಿ ಬೇಕಾದಷ್ಟು ಮನವಿಗಳು ಬಂದಿದ್ದರೂ, ಏತಕ್ಕೋಸ್ಕರ ಅವರು ಒಂದೂವರೆ ವರ್ಷಗಳಿಂದ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಒಂದೂವರೆ ವರ್ಷದಿಂದಲೇ ಅಲ್ಲ. 1949ರಲ್ಲಿ ಅಲ್ಲೊಂದು ಕಾಲೇಜು ಕಟ್ಟಡ ಕಟ್ಟಿಸಬೇಕೆಂದು ಫೌಂಡೇಷನ್ ಹಾಕಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಇಷ್ಟು ವರ್ಷಗಳಿಂದ ಅಲ್ಲಿಂದ ಮನವಿಗಳು ಬರುತ್ತಿದ್ದರೂ, ಮಂತ್ರಿಗಳು ಹದಿನಾರು ಸಾರಿ ಅಲ್ಲಿಗೆ ಟೂರ್ ಮಾಡಿದ್ದರೂ ಅಲ್ಲಿ ಅದರ ಅವಶ್ಯಕತೆ ಇದೆಯೆಂಬುದನ್ನು ಮನಗಂಡೂ ಏಕೆ ಇದುವರೆಗೆ ಇನ್ನೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ?

ಶ್ರೀ ಅಣ್ಣಾರಾವ್ ಗಣಮುಖಿ.—ಯೂನಿವರ್ಸಿಟಿ ಒಂದು ಅಟಾನಮಸ್ ಬಾಡಿಯಾಗಿದೆ. ಆದ್ದರಿಂದ ಅವರೇ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈಗ ಕಾಲೇಜು ಕಟ್ಟಡವನ್ನು ಹೊಸದಾಗಿ ಕಟ್ಟಿಸುವುದಕ್ಕೆ ಬದಲಾಗಿ ಈಗಿರತಕ್ಕ ಡಿಸ್ಪೆಂಸ್ಟ್ ಬೋರ್ಡ್ ಕಟ್ಟಡವನ್ನೇ ಈ ಉದ್ದೇಶಕ್ಕಾಗಿ ಉಪಯೋಗಿಸಬೇಕೆಂಬ ಅಭಿಪ್ರಾಯ ಯೂನಿವರ್ಸಿಟಿಯ ಪರ್ಯಾಲೋಚನೆಯಲ್ಲಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈಗಿರುವ ಡಿಸ್ಪೆಂಸ್ಟ್ ಬೋರ್ಡ್ ಕಟ್ಟಡದ ಜೊತೆಗೆ ಕೊಂಚ ಭಾಗವನ್ನು ಹೊಸದಾಗಿ ಕಟ್ಟಿಸಿದ್ದೇ ಆದರೆ, ಕಾಲೇಜು ತರಗತಿಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಗೊತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಹಾಲಿ ಇರತಕ್ಕ ಡಿಸ್ಪೆಂಸ್ಟ್ ಬೋರ್ಡ್ ಕಟ್ಟಡವನ್ನು ಆ ಉದ್ದೇಶಕ್ಕಾಗಿ ಕೇಳಿಕೊಡದು ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಇಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಸ್ಥಳ ಸಂಕೋಚ ಬಹಳವಾಗಿರುವುದರಿಂದ 64 ಎಕರೆ ಭೂಮಿಯಲ್ಲಿ ಹೊಸದಾಗಿ ಕಟ್ಟಡ ಕಟ್ಟುವುದಕ್ಕೆ ರಾಜ್ಯಪಾಲರಿಂದ ಶಂಕುಸ್ಥಾಪನೆ ಮಾಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಬಂದಿದೆ.

Sri H. V. KOUJALGI.—Supplementary to (*b*): May I know the reason why the classes are held in the mornings ?

Sri ANNA RAO GANAMUKHI.—Where there is no sufficient accommodation available we have perforce to hold classes in the morning.

ಶ್ರೀ ಟಿ. ತಾರೇಗೌಡ.—ತುಮಕೂರು ಜಿಲ್ಲೆಯವರು ಯಾರಾದರೂ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನಲ್ಲಿ ಇದ್ದಾರೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಗೊತ್ತಿಲ್ಲ.

Sri C. J. MUCKANNAPPA.—Has it come to the notice of Government that in the present building there is no room to house the college ?

Sri ANNA RAO GANAMUKHI.—There is no accommodation. University feels that the cost of the new building is prohibitive because the estimate is for Rs 45,96,000 and they are reluctant to send a recommendation to the Government. We are therefore negotiating with the District Board to secure that building.

Mr. DEPUTY SPEAKER.—Question No. 402. Smt. Vijaya Raghavender Rao is permitted to put the question.

Mid-day meals to poor Students in the Schools of Bidar District.

**Q.*—402. Smt. VIJAYA RAGHAVENDER RAO [on behalf of Smt. ANNAPURNA BAI RAGATE (KALYANI)].—

Will the Government be pleased to state :—

(*a*) the number of Schools in different villages of Bidar District where facilities for mid-day meals have been provided for the poor students ;

(*b*) whether it is a fact that Government has sanctioned money for providing facilities for mid-day meals in all the schools at Kalyani ; and if so, why the same has not been utilised ?

A.—Sri ANNA RAO GANAMUKHI (Minister for Education).—

(*a*) 16.
(*b*) No.

Smt. VIJAYA RAGHAVENDER RAO.—Out of 16, in how many schools at Kalyani this facility has been provided ?

†Sri ANNA RAO GANAMUKHI.—Out of the schools in Bidar District 16 schools have been selected.

ಶ್ರೀಮತಿ ರತ್ನಮ್ಮ ಮಾಧವರಾವ್.—(ಬ) ಪ್ರಶ್ನೆಗೆ ಉತ್ತರವಾಗಿ ನಿಜವೆಲ್ಲವೆಂದು ಹೇಳುತ್ತೀರಿ. ಇಗ ಲಾದರೂ ಹಣ ಕೊಡಲು ಯೋಚನೆ ಮಾಡುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ಈಗ ಇಲ್ಲ. ಇನ್ನು ಮುಂದೆ ಎಷ್ಟು ಸಾಧ್ಯವೋ ಅಷ್ಟನ್ನು ಕೊಡುತ್ತೇವೆ. ಎರಡು ಲಕ್ಷ ರೂಪಾಯಿಗಳಲ್ಲಿ ಇಡೀ ನಮ್ಮ ದೇಶಕ್ಕೆ ಹಂಚಲಿಕ್ಕಾಗುತ್ತದೆ. ಎಲ್ಲೆಲ್ಲಿ ಲೋಕಲ್ ಕಮಿಟಿಗಳಿವೆಯೋ ಅಂತಹವರು ಏನಾದರೂ ಕೇಳಿದರೆ, ಅವರಿಗೂ ಕೊಡಲಾಗುತ್ತದೆ.

ಶ್ರೀಮತಿ ಬಸವರಾಜೇಶ್ವರಿ.—ಎರಡು ಲಕ್ಷ ರೂಪಾಯಿಗಳನ್ನು ಇಡೀ ಸ್ಟೇಟಿಗೆ ಹಂಚುವುದನ್ನು ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ?

ಶ್ರೀ ಅಣ್ಣಾರಾವ್ ಗಣಮುಖಿ.—ಈಗಾಗಲೇ ಕಾರ್ಯರೂಪಕ್ಕೆ ತಂದಿದ್ದೇವೆ. ಎರಡು ಲಕ್ಷ ರೂಪಾಯಿಗಳನ್ನು 19 ಜಿಲ್ಲೆಗಳಲ್ಲಿಯೂ ಹಂಚಿದ್ದೇವೆ. ಎಷ್ಟು ಸ್ಕೂಲುಗಳು ಆ ರೀತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟು ಸ್ಕೂಲುಗಳವರು ತೆಗೆದುಕೊಂಡಿದ್ದಾರೆ.

Smt. VIJAYA RAGHAVENDER RAO.—What is the public contribution ?